# IN THE COURT OF THE ADDL. SENIOR CIVIL JUDGE & JMFC., GUBBI
# OS – **126/2022**

Witness present and duly sworn on : 26-03-2025

<u>Further Cross Examination: by Counsel for Defendant No. 1 to 3 :</u>

ನಾನು ಐ ಟಿ ಐ ಓದಿದ್ದೇನೆ . ನಾನು ಕೊಡಿಗೇಹಳ್ಳಿಯ ಶ್ರೀನಿವಾಸ ಪ್ರೌಡಶಾಲೆಯಲ್ಲಿ ನನ್ನ ಪ್ರೌಡ ಶಿಕ್ಷಣವನ್ನು ಮುಗಿಸಿದ್ದೇನೆ. ನನ್ನ ಜನನ ದಿನಾಂಕ 28-05-1999. 2018 ರಲ್ಲಿ ನನಗೆ ಪಿತ್ರಾರ್ಜಿತ ಆಸ್ತಿಗಳ ಬಗ್ಗೆ ತಿಳಿಯಿತು . 2018 ರ ಮುಂಚಿತವಾಗಿ ಪ್ರತಿವಾದಿಗಳ ಆಸ್ತಿಗಳ ಮಾಹಿತಿ ಇರಲಿಲ್ಲ. ಪ್ರತಿವಾದಿಗಳು ನನ್ನನ್ನು ಯಾವತ್ತಿಗೂ ಅವರ ಜಮೀನಿನ ಹತ್ತಿರ ಕರೆದುಕೊಂಡು ಹೋಗಿ ಉಳಿಮೆ ಮಾಡಿಲ್ಲ ಎಂದರೆ ಸರಿ . ಸಾಕ್ಷಿ ಮುಂದುವರೆದು ಅವರ ಮನೆಯ ಹತ್ತಿರ ಹೋಗಿರುತ್ತೇನೆ. ನನ್ನ ತಂದೆ ರಾಜಣ್ಣ /3 ನೇ ಪ್ರತಿವಾದಿ ನಮ್ಮ ಜೊತೆಯಲ್ಲಿ ಇರುವುದಿಲ್ಲ.

ನಾವು 7 ಆಸ್ತಿಗಳ ಮೇಲೆ ದಾವೆ ಹೂಡಿದ್ದೇವೆ . 2017 ರ ವಿಭಾಗ ಪತ್ರವನ್ನು ನಾವು ಒಪ್ಪಿಕೊಳ್ಳುತ್ತೇವೆ . 2017 ರ ವಿಭಾಗ ಪತ್ರದಲ್ಲಿ ಬಂದಿರುವ ಆಸ್ತಿಗಳು ಸರಿ ಎಂದು ಒಪ್ಪಿಕೊಳ್ಳುತ್ತೇವೆ. 2017 ರ ವಿಬಾಗ ಪತ್ರದಂತೆ ಅವರವರ ಭಾಗಕ್ಕೆ ಬಂದಿರುವ ಹಿಸ್ಸೆಯಲ್ಲಿ ಆ ವ್ಯಕ್ತಿಗಳು ಇದ್ದಾರೆ ಎಂದು ನಾವು ಒಪ್ಪಿಕೊಳ್ಳುತ್ತೇವೆ . 2017 ರ ವಿಭಾಗ ಪತ್ರದಂತೆ 1 ನೇ ಪ್ರತಿವಾದಿ ನರಸಮ್ಮ ನವರಿಗೆ 6 ಆಸ್ತಿಗಳು ಹೋಗಿವೆ . ಸದರಿ ಆಸ್ತಿಗಳು ಸರ್ವೆ ನಂ 157/13 , 102/18, 24/7 . ಉಳಿದ ಆಸ್ತಿಗಳ ಸರ್ವೆ ನಂಬರ್ ಮರೆತುಹೋಗಿದೆ.

ಈ ದಾವೆಯಲ್ಲಿ ಪ್ರತಿವಾದಿಗಳು ಸಲ್ಲಿಸಿರುವ ಲಿಖಿತ ಪತ್ರವನ್ನು ನಾನು ತಿಳಿದುಕೊಂಡಿಲ್ಲ. ಮುಂಚೆಯಿಂದ ವಕೀಲರು ಸದರಿ ವಿಷಯವನ್ನು ನಮಗೆ ತಿಳಿಸಿರುವುದಿಲ್ಲ. ನಾವು ಹೊಸದಾಗಿ ನೇಮಕ ಮಾಡಿರುವ ವಕೀಲರ ಮೂಲಕ ಸದರಿ ವಿಷಯವನ್ನು ತಿಳಿದುಕೊಂಡಿಲ್ಲ. ಪ್ರತಿವಾದಿಗಳು ಈ ದಾವೆಯಲ್ಲಿ ಸಲ್ಲಿಸಿರುವ ದಾಖಲೆಗಳ ಮಾಹಿತಿ ನನಗೆ ಇರುವುದಿಲ್ಲ. ಸದರಿ ದಾಖಲೆಗಳನ್ನು ಪ್ರತಿವಾದಿಗಳು ಈ ದಾವೆಯ ಆಸ್ತಿಗಳಿಗೆ ಸಂಬಂಧಿಸಿದಂತೆ

ಕುಣಿಗಲ್ ನ್ಯಾಯಾಲಯದ ದಾವೆಯಲ್ಲಿ ವಿಬಾಗ ಮಾಡಿಕೊಂಡಿರುವ ದಾಖಲೆಯ ಮಾಹಿತಿ ನನಗೆ ಗೊತ್ತಿದೆ . ನಿಪಿ2 ರಲ್ಲಿ ವಿಭಜನೆ ಎಂದು ಷರಾ ಇದೆ ಎಂದರೆ ಸರಿ . ಸದರಿ ವಿಭಜನೆ ಬಗ್ಗೆ ನಮಗೆ ತಕರಾರು ಇದೆ . ಇದಕ್ಕೆ ಸಂಬಂಧಿಸಿದಂತೆ ಕಂದಾಯ ಅಧಿಕಾರಿಗಳ ಮುಂದೆ ಅಥವಾ ನ್ಯಾಯಾಲಯದಲ್ಲಿ ತಕರಾರು ಸಲ್ಲಿಸಿದ್ದೀರಾ ಎಂದರೆ ಇಲ್ಲ. ಸಾಕ್ಷಿ ಮುಂದುವರೆದು ಈ ದಾವೆ ಸಲ್ಲಿಸಿದ್ದೇವೆ . ಹಳೇ ಜಮೀನು ಮತ್ತು ವಿಭಾಗದ ಮಾಹಿತಿ ಇಲ್ಲದೇ ಇದ್ದ ಕಾರಣ ಹಾಗೂ ನನಗೆ ಚಿಕ್ಕ ವಯಸ್ಸು ಆಗಿದ್ದ ಕಾರಣ ತಕರಾರು ಸಲ್ಲಿಸಿಲಿಲ್ಲ. ಆದರೆ ಈ ದಾವೆ ಸಲ್ಲಿಸಿದ್ದೇವೆ.

ಪ್ರತಿವಾದಿಗಳ ಕುಟುಂಬದಲ್ಲಿ 3 ವಿಬಾಗ ಪತ್ರಗಳು ಆಗಿವೆ ಎಂದರೆ ಸರಿ . ಸದರಿ 3 ವಿಬಾಗ ಪತ್ರಗಳನ್ನು ನಾವು ನ್ಯಾಯಾಲಯದಲ್ಲಿ ಪ್ರಶ್ನಿಸಿಲ್ಲ ಎಂದರೆ ಸರಿ . ಸುಮಾರು 15 ವರುಷಗಳಿಂದ ನನ್ನ ತಂದೆ ಜೊತೆಯಲ್ಲಿ ಇಲ್ಲ. ನನ್ನ ತಾಯಿಯು ನನ್ನ ತಂದೆಯೊಂದಿಗೆ 15 ವರುಷಗಳಿಂದ ಜೊತೆಯಲ್ಲಿ ಇಲ್ಲ ಎಂದರೆ ಸರಿ . 3 ನೇ ಪ್ರತಿವಾದಿ ಬೊಮ್ಮನಹಳ್ಳಿ ಪಾಳ್ಯದಲ್ಲಿ ವಾಸ ಇದ್ದಾರೆ . ಅವರು ನನ್ನ ಅಜ್ಜಿ ನರಸಮ್ಮ ನವರ ಜೊತೆಯಲ್ಲಿ ವಾಸ ಇದ್ದಾರೆ . 1998 ರಲ್ಲಿ ನನ್ನ ತಂದೆ ತಾಯಿಯ ವಿವಾಹ ಆಗಿದೆ ಎಂದರೆ ನನ್ನ ತಾಯಿಯ ತಂದೆ ತಿಮ್ಮಪ್ಪ ಮತ್ತು ತಾಯಿ ರಂಗಮ್ಮ ತಿಳಿಸಿದರು . ನನ್ನ ತಾತ ಮರಣ ಹೊಂದಿದ್ದಾರೆ ಮತ್ತು ಅಜ್ಜಿ ಜೀವಂತ ಇದ್ದಾರೆ . ಅವರ ಸಾಕ್ಷಿ ಯನ್ನು ನ್ಯಾಯಾಲಯದಲ್ಲಿ ಹೇಳಿಸಬಲ್ಲೆ .

ಬೋರಯ್ಯನವರ ಮರಣ ಪ್ರಮಾಣ ಪತ್ರವನ್ನು ನಾನು ಹಾಜರುಪಡಿಸಿಲ್ಲ. 1 ನೇ ಪ್ರತಿವಾದಿಯ ಗಂಡ ಚೆನ್ನಪ್ಪ ಅಲಿಯಸ್ ಚೆನ್ನೇಗೌಡ ಯಾವ ಇಸವಿಯಲ್ಲಿ ಮರಣ ಹೊಂದಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಅವರ ಮರಣದ ದಿನಾಂಕವನ್ನು ತಿಳಿದುಕೊಳ್ಳುವ ಪ್ರಯತ್ನ ಮಾಡಿಲ್ಲ ಎಂದರೆ ಚಿಕ್ಕ ವಯಸ್ಸಿನಲ್ಲಿ ಜೊತೆಯಲ್ಲಿ ಇದ್ದೆವು ಕಳೆದ 15 ವರುಷಗಳಿಂದ ಸದರಿ ಮಾಹಿತಿಯನ್ನು ತಿಳಿದುಕೊಳ್ಳುವ ಪ್ರಯತ್ನ ಮಾಡಿಲ್ಲ. ಚೆನ್ನಪ್ಪನವರು 15 ವರುಷಗಳ ಪೂರ್ವದಲ್ಲಿ ಮರಣ ಹೊಂದಿದ್ದರು ಅಥ್ಥವಾ 15 ವರುಷಗಳು ಆಗಿವೆ ಎಂದರೆ ನನಗೆ ಗೊತ್ತಿಲ್ಲ. 2018 ರಲ್ಲಿ ವಿಬಾಗದ ಬಗ್ಗೆ ತಿಳಿದ ನಂತರ ತಕರಾರು ಸಲ್ಲಿಸಲಿಲ್ಲ. ಸಾಕ್ಷಿ ಮುಂದುವರೆದು 2022 ರಲ್ಲಿ ಈ ದಾವೆ ಸಲ್ಲಿಸಿದ್ದೇವೆ . ದಾಖಲಾತಿಗಳನ್ನು ಪಡೆಯುವುದಕ್ಕೆ ಹೆಚ್ಚಿನ ಸಮಯ ಆಗಿದ್ದ ಕಾರಣ ತಕರಾರು ಸಲ್ಲಿಸಲು ತೊಂದರೆ ಆಗಿರುತ್ತದೆ .

ನಾನು ತಿಮ್ಮೆಗೌಡನ ಪಾಳ್ಯದಲ್ಲಿ ಜನಿಸಿದ್ದೇನೆ. ಪ್ರತಿವಾದಿಗಳ ಕುಟುಂಬದ ಸದಸ್ಯರ ಮುಖ ಪರಿಚಯ ನನಗೆ ಇದೆ. ನನ್ನ ಜನನ ಪ್ರಮಾಣ ಪತ್ರವನ್ನು ನ್ಯಾಯಾಲಯದಲ್ಲಿ

ಹಾಜರುಪಡಿಸಲು ತೊಂದರೆ ಇಲ್ಲ . ನಿಪಿ9 ರಲ್ಲಿ ಸರ್ವೆ ನಂ 112/1 ನಮೂದು ಆಗಿರುವುದಿಲ್ಲ. ಸದರಿ ದಾಖಲೆಯಲ್ಲಿ ಇರುವ ಸರ್ವೆ ನಂಬರ್ 102/4 ರಲ್ಲಿ ಯಾರು ಇದ್ದಾರೆ ಎಂದರೆ ಈಗ 2 ನೇ ಪ್ರತಿವಾದಿ ಶಿವಣ್ಣ ರವರು ಇದ್ದಾರೆ . ಸದರಿ ಜಮೀನಿನಲ್ಲಿ ಗಂಗಬೋರಯ್ಯ ರವರು ಇದ್ದಾರೆ ಎಂದರೆ ಸರಿ . ನನ್ನ ವಾದ ಪತ್ರದಲ್ಲಿ ಸರ್ವೆ ನಂ 157/13 ಪಿತ್ರಾರ್ಜಿತ ಆಸ್ತಿ ಎಂದು ಹೇಳಿದ್ದೆನೆ ಎಂದರೆ ಸರಿ . ವಿಬಾಗ ಪತ್ರದಲ್ಲಿ ಬಂದಿರುವ ಸರ್ವೆ ನಂಬರ್ 157/12 ಎಂದರೆ ಸರಿ . ಸರ್ವೆ ನಂ 102/21 ಪಿತ್ರಾರ್ಜಿತ ಆಸ್ತಿ ಎಂದು ಹೇಳಿದ್ದೇನೆ ಎಂದರೆ ಸರಿ . ಸರ್ವೆ ನಂ 102/17 ನರಸಮ್ಮನವರಿಗೆ ಬಂದಿರುವ ಪಿತ್ರಾರ್ಜಿತ ಆಸ್ತಿ ಎಂದರೆ ಸರಿ . ಸ ನಂ 102/4 ರಲ್ಲಿ 1 ನೇ ತಾಕು ಮತ್ತು ಸ ನಂ 102/4 ರಲ್ಲಿ 2 ನೇ ತಾಕು ಪಿತ್ರಾರ್ಜಿತವಾಗಿ ನರಸಮ್ಮ ನವರಿಗೆ ಬಂದಿದೆ ಎಂದರೆ ಸರಿ . ಸ ನಂ 102/18 ಪಿತ್ರಾರ್ಜಿತ ಆಸ್ತಿ ಎಂದು ಬರಸಿದ್ದೇವೆ ಎಂದರೆ ಸರಿ . ಅದನ್ನು ತೋರಿಸಲು ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ಹಾಜರುಪಡಿಸಬಲ್ಲೆನು .

ದಾವಾ ಐಟಂ ನಂ 157/13 ಯಾವ ಗ್ರಾಮದಲ್ಲಿ ಇದೆ ಎಂದರೆ ಅಡಿಕೆಕೆರೆಯಲ್ಲಿ ಇದೆ . ಸದರಿ ಸ ನಂ 157/13 ಶೆಟ್ಟಿಬೀಡುಗ್ರಾಮದಲ್ಲಿ ಇದೆ ಎಂದರೆ ಸರಿ . ಸ ನಂ 112 ದಾವಾ ಐಟಂ ನಂ 1 ಆಸ್ತಿಯು ಅಡಿಕೆಕೆರೆಯಲ್ಲಿ ಇದೆ . ಸದರಿ ಆಸ್ತಿಯು ಗುಬ್ಬಿ ತಾಲ್ಲೂಕು ಸಿ ಎಸ್ ಪುರ ಹೋಬಳಿಗೆ ಸೇರಿದೆ ಎಂದರೆ ಸರಿ . ಸ ನಂ 112/4 ಪಿತ್ರಾರ್ಜಿತ ಆಸ್ತಿ ಎಂದು ತೋರಿಸಲು ಕ್ರಯ ಪತ್ರವನ್ನು ಹಾಜರುಪಡಿಸಿಲ್ಲ. ಸದರಿ ಆಸ್ತಿಯು ಪ್ರತಿವಾದಿಗಳ ಪಿತ್ರಾರ್ಜಿತ ಅಥವಾ 2 ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿಯೇ ಎಂದರೆ ಒಟ್ಟು ಕುಟುಂಬದಲ್ಲಿ ಇದ್ದಾಗ 2 ನೇ ಪ್ರತಿವಾದಿಯು ಖರೀದಿ ಮಾಡಿರುವ ಆಸ್ತಿ . ಸದರಿ ಆಸ್ತಿಯನ್ನು ಒಟ್ಟು ಕುಟುಂಬದ ಆದಾಯದಿಂದ ಖರೀದಿ ಮಾಡಿರುವ ಆಸ್ತಿ ಎಂದು ತೋರಿಸಲು ನಾನು ದಾಖಲೆಯನ್ನು ಹಾಜರುಪಡಿಸಿಲ್ಲ. ಸ ನಂ 112/4 ಶಿವಣ್ಣ ನವರ ಹೆಸರಿನಲ್ಲಿ ಇದೆ . ಸದರಿ ಆಸ್ತಿಯು ಪ್ರತಿವಾದಿಗಳ ಪೂರ್ವಜರ ಹೆಸರಿನಲ್ಲಿ ಇತ್ತು ಎಂದು ತೋರಿಸಲು ನಾನು ದಾಖಲೆಯನ್ನು ಹಾಜರುಪಡಿಸಿಲ್ಲ.

ನಿಪಿ 12 ರಲ್ಲಿ ಶಿವಣ್ಣ ಬಿನ್ ಚೆನ್ನಯ್ಯ ಕ್ರಯ ಎಂದು ನಮೂದು ಇದೆ ಎಂದರೆ ಸರಿ . ಸದರಿ ನಮೂದನ್ನು ನಾವು ಒಪ್ಪಿಕೊಳ್ಳುತ್ತೇವೆ . ನಿಪಿ1 ರಲ್ಲಿ ಇರುವ ಮಾಹಿತಿಯು ಸರಿಯಾಗಿ ಇದೆ . ಪ್ರತಿವಾದಿಗಳು ಕುಣಿಗಲ್ ನ್ಯಾಯಾಲಯದ ದಾವೆಯಲ್ಲಿ 3 ನೇ ಪ್ರತಿವಾದಿಯ

ಹೆಂಡತಿಯ ಹೆಸರು ಸುಜಾತ ಎಂದು ನಮೂದು ಆಗಿರುವುದನ್ನು ನೋಡಿದ್ದೀರಾ ಎಂದರೆ ಇಲ್ಲ. ಸದರಿ ಸುಜಾತ ನನ್ನ ತಾಯಿ ಅಲ್ಲ ಎಂದರೆ ಸರಿ .

ದಾವಾ ಆಸ್ತಿಗಳಲ್ಲಿ ಯಾವ ಯಾವ ಬೆಳೆ ಇದೆ ಎಂದರೆ ನನಗೆ ಗೊತ್ತಿಲ್ಲ . ಯಾವ ಯಾವ ಸರ್ವೆ ನಂಬರ್ ನಿಂದ ಎಷ್ಟು ಆದಾಯ ಇದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಆಸ್ತಿಗಳಲ್ಲಿ ನಾನು ಉಳುಮೆ ಮಾಡಿಲ್ಲ. ವಿಬಾಗ ಪತ್ರದಲ್ಲಿ 1 ನೇ ಪ್ರತಿವಾದಿಗೆ ಬಂದಿದ್ದ ಆಸ್ತಿಗಳು 2 ನೇ ಪ್ರತಿವಾದಿಯ ಹೆಸರಿಗೆ ವರ್ಗಾವಣೆ ಆಗಿದೆ . ಯಾವ ಕಾರಣಕ್ಕೆ 2 ನೇ ಪ್ರತಿವಾದಿಯ ಹೆಸರಿಗೆ ವರ್ಗಾವಣೆ ಆಗಿದೆ ಎಂದರೆ ನನಗೆ ಗೊತ್ತಿಲ್ಲ .

(Further cross examination deferred at the request of counsel for the defendant No. 1 to 3)

(Typed to my dictation in open court)

R.O.I & A.C.

sd/-

Addl. Senior Civil Judge and
JMFC., Gubbi